ದಿನಾಂಕಃ **18.12.2019** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

ಮುಂದುವರೆದ ಪಾಟೀಸವಾಲುಃ **2** ಮತ್ತು **3** ನೇ ಪ್ರತಿವಾದಿಗಳ ಪರ ವಕೀಲರಿಂದಃ

**13.** ಈ ದಾವೆ ಸಲ್ಲಿಸಲು ದಾಖಲೆಗಳನ್ನು ನಾವು ಪಡೆದಕೊಂಡಿದ್ದೇವೆ ಎಂದು ಮೊದಲಿಗೆ ನುಡಿದು ಮುಂದುವರೆದು ನನ್ನ ಗಂಡ ಮತ್ತು ನಾನು ಪಡೆದಿದ್ದೇವೆ ಎಂದು ಮತ್ತೇ ಮುಂದುವರೆದು ನಾನು ಪಡೆದಿದ್ದೇನೆಂದು ಸಾಕ್ಷಿ ನುಡಿಯುತ್ತಾರೆ. ಸದರಿ ದಾಖಲೆಗಳು ಯಾವ ಸರ್ವೆ ನಂಬರ್ ಮತ್ತು ಯಾವ ಗ್ರಾಮಕ್ಕೆ ಸೇರಿದ ದಾಖಲೆಗಳು ಎಂದು ಗೊತ್ತಿದೆ. ಅಸ್ವಾಳು ಗ್ರಾಮ, ದ್ಯೆತ್ಯನಕೆರೆ ಕಾವಲು, ಅನ್ನರಾಯನಪುರಕ್ಕೆ ಸೇರಿದ ದಾಖಲೆಗಳು ಆಗಿರುತ್ತವೆ. ದ್ಯೆತ್ಯನಕೆರೆ ಕಾವಲಿನಲ್ಲಿ ಸರ್ವೆ ನಂಃ **1/17, 19, 20** ಬರುತ್ತವೆ. ಮುಂದುವರೆದು ಸಾಕ್ಷಿ ಯಾವ ಸರ್ವೆ ನಂಬರ ಬರುತ್ತದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಸ್ವಾಳು ಗ್ರಾಮಕ್ಕೆ ಸೇರಿದ ಸರ್ವೆ ನಂಃ **20/1, 71/4, 73/2, 32/1** ಇರುತ್ತವೆ. ಅನ್ನರಾಯಪುರಕ್ಕೆ ಸೇರಿದ ಸರ್ವೆ ನಂಬರ್ ಗಳು ಯಾವೆಂದು ನನಗೆ ಗೊತ್ತಿಲ್ಲ. ಸರ್ವೆ ನಂಃ **1/17+20** ಎ ರ ಆರ್ ಟಿ ಸಿ ಕಾಲಂ **11** ರಲ್ಲಿ ಏನು ಬರೆದಿದೆ ಎಂದು ನಾನು ತಿಳಿದುಕೊಂಡಿಲ್ಲ, ಅದು ಮುಳುಗಡೆಯಾಗಿದೆ. ಅದರಲ್ಲಿ **11** ಚಿಲ್ಲರೆ ಎಕರೆ ಮುಳುಗಡೆಯಾಗಿದೆ. ಅದರಲ್ಲಿ ಒಟ್ಟು ವಿಸ್ತೀರ್ಣ **35** ಎಕರೆಗಳು ಇರುತ್ತದೆ. ದಾವಾ ಸ್ವತ್ತುಗಳ ಬಗ್ಗೆ ನನಗೇನು ಗೊತ್ತಿಲ್ಲ, ನನ್ನ ಅಣ್ಣ **1** ನೇ ಪ್ರತಿವಾದಿಯ ಚಿತಾವಣೆಯ ಮೇರೆಗೆ ನಾನು ದಾವಾ ಸಲ್ಲಿಸಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ.

**14.** ಸದರಿ ಜಮೀನು ನಿಮ್ಮ ತಂದೆ ಕೆಂಪೇಗೌಡರಿಗೆ ಸಿ ಎಸ್ **260/86** ರ ಕೋರ್ಟ್ ಆದೇಶದ ಮೂಲಕ ಬಂದಿದೆ ಎಂದರೆ ಸಾಕ್ಷಿ ಅದು ಅವರಿಗೆ ಗ್ರ್ಯಾಂಟ್ ಆಗಿದೆ ಎನ್ನುತ್ತಾರೆ. ಆ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನಿಪಿ.**6** ಮತ್ತು **37** ರಲ್ಲಿ ಸರ್ವೆ ನಂಃ **32/1** ರಲ್ಲಿ ಜಮೀನನ್ನು ಕ್ರಯ ಮಾಡಿದೆ ಎಂದು ಇದೆ ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಆದಾಯದಿಂದ ಕ್ರಯಕ್ಕೆ ಪಡೆದಿರುವುದು ಎನ್ನುತ್ತಾರೆ ಐಟಂ ನಂಃ **4** ಮತ್ತು **5** ಸ್ವತ್ತುಗಳು ನನ್ನ ತಂದೆಗೆ

ಸಾಗುವಳಿಯ ಮೂಲಕ ಬಂದಿವೆ ಎಂದರೆ ಸರಿಯಲ್ಲ. 4 ನೇ ಐಟಂ ಸ್ವತ್ತನ್ನು ನನ್ನ ಮಾವ ದಾಸೇಗೌಡರಿಗೆ ನನ್ನ ತಂದೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ಆ ಸ್ವತ್ತಿನಲ್ಲಿ ಟಿ ದಾಸೇಗೌಡರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಕೆಂಪೇಗೌಡರ ಹೆಸರಿನಲ್ಲಿ ಸದರಿ ಆಸ್ತಿ ಇದೆ ಎಂಬ ಕಾರಣಕ್ಕಾಗಿ ದಾಸೇಗೌಡರಿಗೆ ಮೋಸ ಮಾಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿಕೊಂಡು ಬಂದಿದ್ದೀರಿ ಎಂದರೆ ಸಾಕ್ಷಿ ನಾನು ಏಕೆ ಆ ರೀತಿ ಬರಲಿ, ನನ್ನ ಪಾಲನ್ನು ಕೇಳಿ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ.

**15.** ದಿಃ **24.12.2004** ರಂದು ನನ್ನ ತಾಯಿ ಮೃತಪಟ್ಟಿದ್ದಾರೆ. ನನ್ನ ಮದುವೆಯಾದ ನಂತರ ಮೃತಪಟ್ಟಿದ್ದಾರೆ. ಮದುವೆ ಪೂರ್ವದಲ್ಲಿ ನಿಮ್ಮ ತಂದೆ ಹಾಗೂ ಅಣ್ಣಂದಿರು ತುಂಬಾ ಪ್ರೀತಿ ವಿಶ್ವಾಸದಿಂದ ನಿಮ್ಮನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಮಾತ್ರ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ನನ್ನ ತಂದೆ ಜೀವಿತ ಕಾಲದಲ್ಲಿ ಯಾವುದೇ ಕೆಲಸ ಮಾಡಿದರು ತನ್ನ ಮೂರು ಜನ ಮಕ್ಕಳ ಒಳಿತಿಗಾಗಿ ಮಾಡುತ್ತಿದ್ದರು ಎಂದರೆ ಸರಿ. ದಿಃ **25.09.1995** ರಲ್ಲಿ ಭೂಸ್ವಾಧೀನ ಆಗಿರುವ ಜಮೀನುಗಳಿಗೆ ನೀಡಿದ ಒಟ್ಟು ಪರಿಹಾರದ ಹಣ ಎಷ್ಟೆಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ನನ್ನ ತಂದೆ ಜೀವಂತ ಇರುವಾಗ ಅದು ಆಗಿದ್ದು ಎನ್ನುತ್ತಾರೆ. ಪರಿಹಾರದ ಮೊತ್ತದಲ್ಲಿ ಹೆಚ್ಚಿನ ಹಣವನ್ನು ನನ್ನ ತಂದೆ ನನ್ನ ಶ್ರೇಯಾಸಿಗಾಗಿ ಬಳಸಿದ್ದಾರೆ ಎಂದರೆ ಸರಿಯಲ್ಲ. ಅನ್ನರಾಯಪುರ ಸರ್ವೆ ನಂಃ **60/47** ಪಿ1 ರಲ್ಲಿ **4** ಎಕರೆ ಜಮೀನು ಹಾಗೂ ದೈತ್ಯನಕೆರೆ ಕಾವಲಿನ ಸರ್ವೆ ನಂಃ **1/13** ಬ ರಲ್ಲಿ **4** ಎಕರೆ **12** ಗುಂಟೆ ಹಾಗೂ ಅನ್ನರಾಯಪುರ ಸರ್ವೆ ನಂಃ **60/46** ರಲ್ಲಿ **3** ಎಕರೆ ಜಮೀನನ್ನು ನನ್ನ ತಂದೆ ನನ್ನ ಗಂಡನ ಹೆಸರಿನಲ್ಲಿ ಕ್ರಯಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ ನನ್ನ ಗಂಡನೇ ಅದನ್ನು ಖರೀದಿ ಮಾಡಿದ್ದಾರೆ. ನಾನು ಹೇಳುವುದು ಸುಳ್ಳಾಗಿದ್ದು ಅಣ್ಣಂದಿರಿಗೆ ಮೋಸ ಮಾಡಿ ದಾವಾ ಸ್ವತ್ತುಗಳಲ್ಲಿ ಭಾಗ ತೆಗೆದುಕೊಳ್ಳಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**16.** ನಿಮ್ಮ ಗಂಡ ಯಾವ ಆದಾಯದಿಂದ ಸದರಿ ಜಮೀನುಗಳನ್ನು ಖರೀದಿ ಮಾಡಿದ್ದಾರೆಂದು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಊರಲ್ಲಿ ಕೆಲವು ಜಮೀನುಗಳು ಇದ್ದವು, ಅವುಗಳನ್ನು ಮಾರಿ ನನ್ನ ಗಂಡ ಮೇಲಿನ ಜಮೀನುಗಳನ್ನು ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ಊರಲ್ಲಿ ಜಮೀನುಗಳನ್ನು ಮಾರಾಟ ಮಾಡಿದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸುತ್ತೇನೆ. ಭೂಸ್ವಾಧೀನಗೊಂಡ ಜಮೀನುಗಳಿಗೆ ಹೆಚ್ಚಿನ ಪರಿಹಾರ ಕೋರಿ ನನ್ನ ತಂದೆ ಅರ್ಜಿ ಸಲ್ಲಿಸಿದ್ದಾರೂ ಇಲ್ಲವೂ ನನಗೆ ಗೊತ್ತಿಲ್ಲ. ನನ್ನ ತಂದೆ ಇದೇ ನ್ಯಾಯಾಲಯದಲ್ಲಿ ಎಲ್ ಎ ಸಿ **435/1998** ನ್ನು ಹೆಚ್ಚಿನ ಪರಿಹಾರಕ್ಕಾಗಿ ದಾಖಲಿಸಿದ್ದರು ಎಂದರೆ ಸರಿ. ಆ ಪ್ರಕರಣ ವಜಾ ಆದ ಬಗ್ಗೆ ನನಗೆ ಗೊತ್ತಾಗಲಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಪರಿಹಾರ ಹಣದ ಚೆಕ್‌ನ್ನು ಉಪ ವಿಭಾಗಾಧಿಕಾರಿಗಳು ನನ್ನ ತಂದೆಗೆ ಕೊಟ್ಟಿದ್ದಾರೆ ಎಂದರೆ ಸರಿ. ಉಳಿದ ರೂಃ **4,10,000-00** ಹಣಕ್ಕೆ ಈ ನ್ಯಾಯಾಲಯದಲ್ಲಿ ಎಕ್ಸಿ .ಕ್ಯೂ. **47/2010** ನ್ನು ದಾಖಲಿಸಿದರು ಎಂದರೆ ಸರಿ.

(ಈ ಹಂತದಲ್ಲಿ ನ್ಯಾಯಾಲಯದ ಕಾಲಾವಕಾಶ ಮುಗಿದು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.

ಓ ಎಸ್ ನಂಃ 117 /2016 ಪಿಡಬ್ಲ್ಯು.1